**ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ದೇವನಹಳ್ಳಿ**

ದಿನಾಂಕಃ 17-06-2026

**ಉಪಸ್ಥಿತರುಃ** ಶ್ರೀ ವೆಂಕಟೇಶ. ಎನ್, ಬಿಎ.,ಎಲ್‌ಎಲ್.ಬಿ.ಎಲ್ ಎಲ್.ಎಂ
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ

**ಸಿ.ಸಿ. ನಂ.** 8630-2022

**ಪಿರ್ಯಾದುದಾರರು** ಃ ಚನ್ನರಾಯಪಟ್ಟಣ ಪೊಲೀಸ್ ಠಾಣೆ.

**- ವಿರುದ್ಧ-**

**ಆರೋಪಿತರು** ಃ
1. ರಾಮಕೃಷ್ಣಪ್ಪ ಬಿನ್ ಗುಂಡಪ್ಪ
2. ಮುನಿರಾಜ್ ಜಿ ಬಿ ಬಿನ್ ಗುಂಡಪ್ಪ ,
3. ಮಂಜುಳಮ್ಮ ,ಗಂಡನ ಹೆಸರು ರಾಮಕೃಷ್ಣಪ್ಪ
4. ವೆಂಕಟಲಕ್ಷ್ಮಮ್ಮ , ಗಂಡನ ಹೆಸರು ಮುನಿರಾಜ
5. ಸುಧಾಕರ , ಬಿನ್ ರಾಮಕೃಷ್ಣಪ್ಪ

**ದೋಷಾರೋಪಣೆ**

ಶ್ರೀ ವೆಂಕಟೇಶ. ಎನ್, ಬಿಎ.,ಎಲ್‌ಎಲ್.ಬಿ.ಎಲ್ ಎಲ್.ಎಂ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ದೇವನಹಳ್ಳಿ ಆದ ನಾನು ಆರೋಪಿತರಾದ ನಿಮ್ಮ ಮೇಲೆ ಈ ಕೆಳಕಂಡ ಆರೋಪಣೆಗೆ ಈ ಮೂಲಕ ಗುರಿಪಡಿಸುತ್ತೇನೆ.

ದಿನಾಂಕಃ 24-09-2021 ರಂದು ಸಂಜೆ ಸುಮಾರು 04.30 ಗಂಟೆ ಸಮಯದಲ್ಲಿ ಚನ್ನರಾಯಪಟ್ಟಣ ಪೋಲಿಸ್ ಠಾಣಾ ವ್ಯಾಪ್ತಿಗೆ ಸೇರಿದ ಬಿದಲಪುರ ಗ್ರಾಮದ ಸರ್ವೆ ನಂ 57 ರ ಜಮಿನೀನಲ್ಲಿ ಸಾಕ್ಷಿ 1 ರಿಂದ ಸಾಕ್ಷಿ 3 ರವರು ಮೆಣಸಿನ ಸಸಿಗಳನ್ನು ನಾಟಿ ಮಾಡುತ್ತಿದ್ದು ಅದೇ ಸಮಯಕ್ಕೆ ಅಲ್ಲಿಗೆ ಬಂದು 1 ರಿಂದ 5 ನೇ ಆರೋಪಿಗಳಾದ ನೀವು ಅಕ್ರಮ ಗುಂಪು ಕಟ್ಟಿಕೊಂಡು ಬಂದು ಜಮೀನು ನಮಗೆ ಸೇರಬೇಕೆಂದು 5 ನೇ ಆರೋಪಿಯು ಸಾಕ್ಷಿ 02 ರವರನ್ನು ನೆಲಕ್ಕೆ ಕೆಡವಿ ಕಾಲಿನಿಂದ ಒದೆಯುತ್ತಿದ್ದು, ಇದನ್ನು ಕಂಡು ಬಿಡಿಸಲು ಹೋದ ಸಾಕ್ಷಿ-2 ರವರನ್ನು 4 ನೇ ಮತ್ತು 2 ನೇ ಆರೋಪಿಗಳು ಕೈಗಳಿಂದ ಹಲ್ಲೇ ಮಾಡಿದ್ದು, ಈ ಮೂಲಕ ನೀವು

ಭಾರತೀಯ ದಂಡ ಸಂಹಿತೆಯ ಕಲಂ. 323 ಸಹ ವಾಚಕ ಕಲಂ 149 ರಡಿಯಲ್ಲಿ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಎರಡನೇಯದಾಗಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಅದೇ ದಿನ, ಅದೇ ಸಮಯ ಹಾಗೂ ಸ್ಥಳದಲ್ಲಿ ಆರೋಪಿ 1 ಆದ ನೀವು ಸಾಕ್ಷಿ2 ರವರ ಬಟ್ಟೆ ಎಳೆದಾಡಿ ಗುದ್ದಲಿಯಿಂದ ಸಾಕ್ಷಿ-2 ರವರಿಗೆ ಹಲ್ಲೇ ಮಾಡಿ ಸಾಮಾನ್ಯ ಸ್ವರೂಪದ ಗಾಯ ಉಂಟುಮಾಡಿದ್ದು ಈ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.324 ಸಹ ವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಮೂರನೇಯದಾಗಿ, ಅದೇ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿಗಳಾದ ನೀವು ಸಮಾನ ಉದ್ದೇಶದಿಂದ ಸಾಕ್ಷಿ 3 ರವರನ್ನು ಉದ್ದೇಶಿಸಿ 3 ನೇ ಆರೋಪಿಯು ಬೋಳಿ ಮಗನೇ ನಿನ್ನನ್ನು ಸುಮ್ಮನೇ ಬಿಡುವುದಿಲ್ಲ ಎಂದು ಅವಾಚ್ಯ ಶಬ್ದಗಳಿಂದ ಬೈದು ಅವರು ಶಾಂತಿ ಭಂಗ ಮಾಡಲು ಉದ್ರೇಕಿಸುವಂತೆ ಅವಮಾನ ಮಾಡಿರುತ್ತೀರಿ. ಈ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.504 ಸಹ ವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ನಾಲ್ಕನೇಯದಾಗಿ ಆರೋಪಿಯಾದ ನೀವು ಅದೇ ದಿನ, ಅದೇ ಸಮಯ ಹಾಗೂ ಸ್ಥಳದಲ್ಲಿ 1 ರಿಂದ 5 ನೇ ಆರೋಪಿಗಳು ಇದು ನಮ್ಮ ಜಮೀನು ನಮ್ಮ ಜಮೀನಿನ ತಂಟೆಗೆ ಬಂದರೆ ನಿಮ್ಮನ್ನು ಜೀವ ಸಹಿತ ಬಿಡುವುದಿಲ್ಲ ಎಂದು ಪ್ರಾಣಬೆದರಿಕೆ ಹಾಕಿರುತ್ತೀರಿ. ಈ ಮೂಲಕ ನೀವು ಭಾರತೀಯ ದಂಡ ಸಂಹಿತೆಯ ಕಲಂ.506 ಸಹ ವಾಚಕ ಕಲಂ 149 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ.

ಪ್ರಶ್ನೆ ಃ ಮೇಲೆ ಓದಿ ಹೇಳಿದ ದೋಷಾರೋಪಣೆ ನಿಮಗೆ ಅರ್ಥವಾಯಿುತೇ?

ಉತ್ತರಃ ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಆರೋಪಿ 25

ಪ್ರಶ್ನೆಃ ಮೇಲಿನ ದೋಷಾರೋಪಣೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆ?

ಉತರಃ ಆರೋಪಿ 1

ಆರೋಪಿ 2

ಆರೋಪಿ 3

ಆರೋಪಿ 4

ಆರೋಪಿ 5

ಈ ಮೇಲಿನ ಆರೋಪಣೆ ಬಗ್ಗೆ ನಿಮ್ಮ ವಿರುದ್ಧ ವಿಚಾರಣೆಯಾಗಬೇಕೆಂದು ನಿರ್ದೇಶಿಸುತ್ತೇನೆ.

**ಈ ಮೇಲಿನ ಆರೋಷಣೆಯನ್ನು ಮೇಲಿನ ಆರೋಪಿಗೆ ಕನ್ನಡದಲ್ಲಿ ಓದಿ ಹೇಳಿ ಆತನು ಹೇಳಿದ ಹೇಳಿಕೆಯನ್ನು ನನ್ನ ಸ್ವಅಕ್ಷರದಲ್ಲಿ ಬರೆದುಕೊಳ್ಳಲಾಗಿದೆ ಮತ್ತು ಅದು ನಿಜವೆಂದು ದೃಢೀಕರಿಸಲಾಗಿದೆ.**

**(**ಶ್ರೀ ವೆಂಕಟೇಶ. ಎನ್**)**
ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ದೇವನಹಳ್ಳಿ

ಆರೋಪಿಗಳ ಸಹಿಃ

1.
2.
3.
4.
5.